## **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

## **ಫೌಜುದಾರಿ ಪ್ರಕರಣ ಸಂಖ್ಯೆ 36/2024**

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**-ವಿರುದ್ಧ-**

ಆರೋಪಿಃ ಪಿ ಹರದೀಪ್ ರೆಡ್ಡಿ ತಂದೆ ಪೋ ರೆಡ್ಡಿ ಮಧುಸೂಧನ್,
ವಯಸ್ಸುಃ 24 ವರ್ಷಗಳು,
ಉದ್ಯೋಗಃ ಸಿವಿಲ್ ಇಂಜಿನೀಯರ್,
ಸಾಕೀನಃ 1-29-2, ಪೆಂಟಿಕಂಟಿ ನಗರ,
ಆರ್.ಟಿ.ಸಿ ಬಸ್ ಸ್ಟೇಷನ್, ಬಗಾನಪಲ್ಲೊ ಮಂಡಲ್,
ಕರ್ನೋಲ್ ಜಿಲ್ಲೆ, ಆಂಧ್ರಪ್ರದೇಶ ರಾಜ್ಯ,
ಹಾಲಿ ವಾಸ್ತವ್ಯಃ28/1045-ಈ, ಸಾಯಿಬಾಬಾ ನಗರ,
ನಂದ್ಯಾಲ್, ಸನ್‌ಲೈಟ್ ಸ್ಕೂಲ್ ಹತ್ತಿರ, ಆಂಧ್ರಪ್ರದೇಶ ರಾಜ್ಯ.

### **ಆರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲನೇಯದಾಗಿ ದಿನಾಂಕಃ25-11-2023 ರಂದು ಸಾಯಂಕಾಲ 05-00 ರ ಸಮಯದಲ್ಲಿ ಆರೋಪಿಯು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ-69 ರ ಮೇಲೆ ಆರೋಪಿಯು ಹೊಂಡಾ ಕಂಪನಿಯ ಅಮೇಜ್ ಕಾರಿನ ಸಂಖ್ಯೆಃ ಕೆಎ-51/ಎಮ್.ಎಮ್-8054 ನ್ನ ಗೇರುಸೊಪ್ಪಾ ಕಡೆಯಿಂದ ಹೊನ್ನಾವರ ಕಡೆಗೆ ಅತಿವೇಗ ಅಥವಾ ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಹೊನ್ನಾವರ ತಾಲೂಕು ಮುಗ್ವಾ ಗ್ರಾಮದಲ್ಲಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕ್ರಾಸ್ ಹತ್ತಿರ ಇರುವ ರಾಘವೇಂದ್ರ ಭಾರತಿ ಸಂಸ್ಕೃತ ಪಾಠ ಶಾಲೆ ಎದುರು ರಸ್ತೆಯ ಮೇಲೆ ತನ್ನ ಮುಂದಿನಿಂದ ಹೋಗುತ್ತಿದ್ದ ಒಂದು ಮೋಟಾರು ಸೈಕಲ್ಲನ್ನು ಓವರ್ಟೇಕ್ ಮಾಡಿ ಓಮ್ಮೇಲೆ ನಿಷ್ಕಾಳಜಿತನದಿಂದ ತನ್ನ ಕಾರನ್ನು ಬಲ ಬದಿಗೆ ಚಲಾಯಿಸಿ, ಅದೇ ವೇಳೆಗೆ ಎದುರಿನಿಂದ ಅಂದರೆ ಚಾಸಾ-6 ಶ್ರೀ ದಯಾನಂದ ತಂದೆ ಶಂಕರ ಅಂಬಿಗರವರು ಕೆ.ಟಿ.ಎಮ್ 125 ಡ್ಯೂಕ್ ಮೋಟಾರು ಸೈಕಲ್ ಸಂಖ್ಯೆಃಕೆಎ-04/ಜೆ.ಎಕ್ಸ-4142 ರ ಹಿಂಬದಿಯಲ್ಲಿ ಸಹ ಸವಾರಳಾದ ಮೃತಳಾದ ಕುಮಾರಿ. ತ್ರಿವೇಣಿ ತಂದೆ ಗಣಪತಿ ಅಂಬಿಗರವರಿಗೆ ಕ್ರೂಡಿಸಿಕೊಂಡು ಹೋಗುತ್ತಿದ್ದ ಮೋಟಾರು ಸೈಕಲ್ಲಿಗೆ ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 279 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ರೀತಿ ಅಪಘಾತವಾನ್ನ ಉಂಟುಮಾಡಿದ್ದರಿಂದ, ಮೋಟಾರು ಸೈಕಲ್ ಸವಾರನಾದ ಚಾಸಾ-6 ದಯಾನಂದ ಶಂಕರ ಅಂಬಿಗರವರಿಗೆ ಎಡ ಕಾಲಿಗೆ, ಕೈಗಳಿಗೆ, ಮೈಗೆ ಸಾದ ಸ್ವರೂಪದ ಗಾಯ ಉಂಟು ಮಾಡಿ, ನೀವು ಭಾರತೀಯ ದಂಡ ಸಂಹಿತೆ ಕಲಂ 337ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ರೀತಿ ಅಪಘಾತವಾನ್ನ ಉಂಟುಮಾಡಿದ್ದರಿಂದ, ಮೋಟಾರು ಸೈಕಲ್ ಸವಾರನಾದ ಚಾಸಾ-6 ದಯಾನಂದ ಶಂಕರ ಅಂಬಿಗರವರಿಗೆ ಬಲ ಕಾಲಿಗೆ ಗಂಭೀರ ಸ್ವರೂಪದ ಗಾಯ ಉಂಟು ಮಾಡಿ, ನೀವು ಭಾರತೀಯ ದಂಡ ಸಂಹಿತೆ ಕಲಂ 338ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

4.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಮೋಟಾರು ಸೈಕಲ್ ಸವಾರಳಾದ ಕುಮಾರಿ.ತ್ರಿವೇಣಿ ತಂದೆ ಗಣಪತಿ ಅಂಬಿಗರವರಿಗೆ ತಲೆಗೆ, ಮುಖಕ್ಕೆ, ಎರಡು ಕಾಲಿನ ಬೆರಳಿಗೆ, ಮುಖಕ್ಕೆ ಮಾರಣಾಂತಿಕ ಗಾಯಗಳಾಗಿ ಚಿಕಿತ್ಸೆಗಾಗಿ ಹೊನಾನವರದ ಸೇಂಟ್ ಇಗ್ನೇಶಿಯಸ್ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಕಸ್ತೂರಬಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಯಲ್ಲಿದ್ದವರು ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ26-11-2023ರಂದು ಬೆಳಿಗ್ಗೆ 10-00ಗಂಟೆಗೆ ಮರಣ ಹೊಂದಿದ್ದು, ಅವರ ಮರಣವು ನಿಮ್ಮ ನಿರ್ಲಕ್ಷತನದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ1. ನೀವು ಸದ್ರಿ ಆರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ?

ಉತ್ತರಃ

ಪ್ರಶ್ನೆ2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೇ?

ಉತ್ತರಃ

**(ಆರೋಪಣೆಯನ್ನ ಆರೋಪಿಗೆ ಗೊತ್ತಿರುವ ಇಂಗ್ಲಿಷ್ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಅವರು ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

**ಸಹಿ ಇದೆ.**

ದಿನಾಂಕಃ 29-03-2025. **(ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾಯದಂಡಾಧಿಕಾರಿಗಳು, ಹೊನ್ನಾವರ.**